**ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ನ್ಯಾಯಿಕ ದಂಡಾಧಿಕಾರಿಗಳರವರ ನ್ಯಾಯಾಲಯ, ಹೆಗ್ಗಡದೇವನಕೋಟೆ**

**ಸಿ.ಸಿ.ನಂ.1782/2021**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಪ್ರಮೋದ್ ಸಿ | ಪಿ.ಡಬ್ಲ್ಯೂ-2 |
| ತಂದೆಯ ಹೆಸರು | : | ಚಂದ್ರಶೇಖರ್ | ಸಿ.ಡಬ್ಲ್ಯೂ-1 |
| ವಯಸ್ಸು | : | 25 ವರ್ಷ | - |
| ಉದ್ಯೋಗ | : | ಪೊಲೀಸ್ ಪೇದೆ | ಸಾಕ್ಷಿಗೆ ಪ್ರಮಾಣ ವಚನ ಬೋಧಿಸಿದ ದಿನಾಂಕಃ **07.09.2023.** |
| ವಾಸಸ್ಥಳ | : | ಸರಗೂರು | - |

**ಮುಖ್ಯ ವಿಚಾರಣೆಃ ಎಪಿಪಿ ರವರಿಂದಃ**

ನಾನು ಸರಗೂರು ಪೊಲೀಸ್ ಠಾಣೆಯಲ್ಲಿ ದಿಃ 07.01.2021 ರಿಂದ ಇಲ್ಲಿಯವರಗೆ ಪೊಲೀಸ್ ಪೇದೆ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 27.04.2021 ರಂದು ನನ್ನನ್ನು ಮತ್ತು ಚಾಸಾ-2 ರವರನ್ನು ಗ್ರಾಮದ ಗಸ್ತಿಗೆ ನೇಮಕ ಮಾಡಿರುತ್ತಾರೆ. ನಾನು ಮತ್ತು ಚಾಸಾ-2 ರವರು ಮಧ್ಯಾಹ್ನ 2.00 ಘಂಟೆಗೆ ಠಾಣೆಯನ್ನು ಬಿಟ್ಟು ಬಡಗಲಪುರ ಮತ್ತು ಹಾದನೂರು ಗ್ರಾಮದ ಬಳಿ ಗಸ್ತು ಮಾಡಲು ತೆರಳಿರುತ್ತೇವೆ. ಗಸ್ತು ಮಾಡಿಕೊಂಡು ಬರುವಾಗ ಸಂಜೆ 4.00 ಘಂಟೆಯ ಸಮಯದಲ್ಲಿ , ಯಶವಂತಪುರ ಗ್ರಾಮದ ಬಸ್ ನಿಲ್ದಾಣದ ಬಳಿ ಇರುವ ರಸ್ತೆಯಲ್ಲಿ ಯಾರೋ ಒಬ್ಬ ಆಸಾಮಿ ಒಂದು ಪ್ಲಾಸ್ಟಿಕ್ ಚೀಲ ಹಿಡಿದುಕೊಂಡು ನಿಂತಿದ್ದು , ನಾನು ಮತ್ತು ಚಾಸಾ-2 ರವರು ಪರಿಶೀಲನೆ ಮಾಡಲು ಆಸಾಮಿಯ ಬಳಿ ಹೋದಾಗ ಸಮವಸ್ತ್ರದಲ್ಲಿದ್ದ ನಮ್ಮನ್ನು ನೋಡಿ ಆಸಾಮಿಯು ಪ್ಲಾಸ್ಟಿಕ್ ಚೀಲವನ್ನು ಅಲ್ಲೇ ಬಿಟ್ಟು ಓಡಿಹೋಗಲು ಪ್ರಯತ್ನ ಮಾಡಿರುತ್ತಾನೆ. ನಂತರ ನಾನು ಮತ್ತು ಚಾಸಾ-2 ರವರು ಆಸಾಮಿಯನ್ನು ಹಿಂಬಾಲಿಸಿಕೊಂಡು ಹಿಡಿಯಲು ಪ್ರಯತ್ನಿಸಿದಾಗ ಆಸಾಮಿಯು ಬಸ್ ನಿಲ್ದಾಣದ ಪಕ್ಕದಲ್ಲಿದ್ದ ಜಮೀನಿನ ಕಡೆ ತಪ್ಪಿಸಿಕೊಂಡು ಹೋಗಿರುತ್ತಾನೆ. ಆತನ ಬಗ್ಗೆ ಸ್ಥಳದಲ್ಲಿದ್ದ ಯಶವಂತಪುರ ಗ್ರಾಮದ ನಾಗರಾಜು ಬಿನ್ ದೊಡ್ಡಯ್ಯರವರನ್ನು ತಪ್ಪಿಸಿಕೊಂಡ ಆಸಾಮಿಯ ಹೆಸರು ಮತ್ತು ವಿಳಾಸ ಕೇಳಲಾಗಿ ಅವನ ಹೆಸರು ಶಿವಸಿದ್ದಯ್ಯ ಬಿನ್ ಒಣಕಾರಯ್ಯ, 55 ವರ್ಷ, ಪರಿಶಿಷ್ಟ ಜಾತಿ ಜನಾಂಗ, ಯಶವಂತಪುರ ಗ್ರಾಮ, ಸರಗೂರು ತಾಲ್ಲೂಕು ಎಂದು ತಿಳಿಸಿರುತ್ತಾರೆ.

ನಂತರ ಅಲ್ಲೇ ಬಿದ್ದಿದ್ದ ತುಂಬಿದ ಪ್ಲಾಸ್ಟಿಕ್ ಚೀಲವನ್ನು ಪರಿಶೀಲಿಸಲಾಗಿ 90 ಎಂ.ಎಲ್ ನ ಒರಿಜಿನಲ್ ಚಾಯ್ಸ್ ಡಿಲಕ್ಸ್ ವಿಸ್ಕಿ ಮದ್ಯ ತುಂಬಿದ 50 ಪೌಚುಗಳು ಇರುವುದು ಕಂಡುಬಂದಿರುತ್ತದೆ. ಈತನು ಯಾವುದೇ ಪರವಾನಗಿ ಇಲ್ಲದೆ ಅಕ್ರಮವಾಗಿ ಹೆಚ್ಚಿನ ಬೆಲೆಗೆ ಮಾರಾಟ ಮಾಡುವ ಉದ್ದೇಶದಿಂದ ತೆಗೆದುಕೊಂಡು ಹೋಗುತ್ತಿರುವುದಾಗಿ ಕಂಡುಬಂದಿರುತ್ತದೆ. ನಂತರ ಅಲ್ಲಿ ಇದ್ದ ಪ್ಲಾಸ್ಟಿಕ್ ಚೀಲ ಮತ್ತು ಪೌಚುಗಳನ್ನು ಸಂಜೆ 5.30 ರ ಸಮಯದಲ್ಲಿ ಠಾಣೆಗೆ ತೆಗೆದುಕೊಂಡು ಬಂದು ಚಾಸಾ-10 ರವರಿಗೆ ನೀಡಿರುತ್ತೇವೆ. ನಂತರ ಅದೇ ದಿನ ಚಾಸಾ-3 ಮತ್ತು 4 ರವರ ಸಮಕ್ಷಮ ಸರಗೂರು ಪೊಲೀಸ್ ಠಾಣೆಯ ಆವರಣದಲ್ಲಿ ಮಹಜರ್ ಕ್ರಮವನ್ನು ಜರುಗಿಸಿ ಮಾಲುಗಳನ್ನು ಅಮಾನತ್ತುಪಡಿಸಿಕೊಂಡಿರುತ್ತೇವೆ. ಆರೋಪಿತನಿಂದ ವಶಪಡಿಸಿಕೊಂಡ ಸಾರಾಯಿ ಪೌಚುಗಳ ಪೈಕಿ 30 ಸಾರಾಯಿ ಪೌಚುಗಳನ್ನು ರಾಸಾಯಿನಿಕ ಪರೀಕ್ಷೆಗೆ ತೆಗೆದಿದ್ದು ಅವುಗಳನ್ನು ಎ ಎಂಬ ಅಕ್ಷರದಿಂದ ಅರಗಿನಿಂದ ಸೀಲಿ ಮಾಡಿರುತ್ತೇವೆ.

ಈ ಬಗ್ಗೆ ನಾನು ಚಾಸಾ-10 ರವರಿಗೆ ಪಿರ್ಯಾದು ನೀಡಿದ್ದು ಪಿರ್ಯಾದನ್ನು ನಿಪಿ-1 ಎಂದು ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು , ಅಮಾನತ್ತು ಮಹಜರನ್ನು ನಿಪಿ-2 ಎಂದು ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು.

ದಿಃ 28.04.2021 ರಂದು ಕೃತ್ಯ ನಡೆದ ಸ್ಥಳಕ್ಕೆ ಚಾಸಾ-10 ಮತ್ತು ಚಾಸಾ-5, 6 ಮತ್ತು ನನ್ನ ಸಮಕ್ಷಮ ಘಟನಾ ಸ್ಥಳದ ಮಹಜರ್ ಕ್ರಮವನ್ನು ಬೆಳಿಗ್ಗೆ 10.00 ರಿಂದ 11.00 ಘಂಟೆಯವರೆಗೆ ಜರುಗಿಸಿರುತ್ತೇವೆ. ಸ್ಥಳ ಮಹಜರನ್ನು ನಿಪಿ-3 ಎಂದು ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು. ಈ ಬಗ್ಗೆ ನಾನು ತನಿಖಾಧಿಕಾರಿಗಳ ಮುಂದೆ ಹೇಳಿಕೆ ನೀಡಿರುತ್ತೇನೆ.

ರಾಸಾಯಿನಿಕ ಪರೀಕ್ಷೆಗೆ ಕಳುಹಿಸಿದ್ದ ಸಾರಾಯಿ ಪೌಚುಗಳನ್ನು ವರದಿ ಬಂದ ನಂತರ ಅಂತಿಮ ವರದಿಯ ಜೊತೆ ಖಾಲಿ ಸಾರಾಯಿ ಪೌಚುಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿದ್ದು ಅವುಗಳನ್ನು ಮು.ಮ 1 ರಿಂದ 30 ಮತ್ತು ಪ್ಲಾಸ್ಟಿಕ್ ಚೀಲವನ್ನು ಮು.ಮ.31 ಎಂದು ಗುರುತಿಸಲಾಯಿತು. ಆರೋಪಿಯನ್ನು ನೋಡಿದರೆ ಗುರುತಿಸುತ್ತೀರಾ ಎಂದು ಕೇಳಲಾಗಿ ಸಾಕ್ಷಿಯು ಆತನು ನಮ್ಮನ್ನು ನೋಡಿ ಓಡಿ ಹೋಗಿರುತ್ತಾನೆ ಎಂದು ನುಡಿದಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಹೆಚ್.ಬಿ.ಎಂ ವಕೀಲರಿಂದಃ**

ದಿಃ 27.04.2021 ರಂದು ನಾನು ಮಧ್ಯಾಹ್ನ 2.00 ರಿಂದ ಕೆಲಸ ನಿರ್ಹಿಸುತ್ತಿದ್ದೆ. ಬಡಗಲಪುರ, ಹಾದನೂರು, ಯಶವಂತಪುರ ಗ್ರಾಮಗಳ ಕಡೆ ನನ್ನನ್ನು ಮತ್ತು ಚಾಸಾ-2 ರವರನ್ನು ಗಸ್ತಿಗೆ ನೇಮಕ ಮಾಡಿರುತ್ತಾರೆ. ಗಸ್ತು ಹಾಕಿದ ಬಗ್ಗೆ ಠಾಣಾ ದಿನಚರಿ ಪುಸ್ತಕದಲ್ಲಿ ಸಹಿ ಮಾಡಿ ಹೋಗಿರುತ್ತೇವೆ ಎಂದರೆ ಸರಿ . ಗಸ್ತು ಕರ್ತವ್ಯಕ್ಕೆ ಹೋಗಲು ಸರಗೂರು ಪೊಲೀಸ್ ಠಾಣೆಯನ್ನು ಬಿಟ್ಟಾಗ ಮಧ್ಯಾಹ್ನ 2.00 ಘಂಟೆಯಾಗಿತ್ತು. ಮೋಟಾರ್ ಸೈಕಲಿನಲ್ಲಿ ನಾನು ಮತ್ತು ಚಾಸಾ-2 ಗಸ್ತು ಹೋಗಿರುತ್ತೇವೆ. ನಾನು ನೀಡಿದ ಪಿರ್ಯಾದಿನಲ್ಲಿ ಇಂತಹ ನಂಬರಿನ ಬೈಕಿನಲ್ಲಿ ಹೋಗಿರುತ್ತೇವೆ ಎಂದು ನಮೂದಿಸಿಲ್ಲ ಎಂದರೆ ಸರಿ .

ಹಾದನೂರಿಗೆ ಹೋದಾಗ ಸಮಯ ಮಧ್ಯಾಹ್ನ 3.15 ಘಂಟೆಯಾಗಿತ್ತು. ಹಾದನೂರಿಗೂ ಯಶವಂತಪುರ ಗ್ರಾಮಕ್ಕೆ ಸುಮಾರು 4 ಕಿ.ಮೀ ಅಂತರವಿರುತ್ತದೆ. ಹಾದನೂರು ಗ್ರಾಮವನ್ನು 3.50 ಕ್ಕೆ ಬಿಟ್ಟು ಯಶವಂತಪುರ ಗ್ರಾಮಕ್ಕೆ 4.00 ಘಂಟೆಗೆ ತಲುಪಿರುತ್ತೇವೆ.

ಆರೋಪಿಯು ಬಸ್ ನಿಲ್ದಾಣದಲ್ಲಿ ನಿಂತಿದ್ದನೋ ಅಥವಾ ನಡೆದುಕೊಂಡು ಹೋಗುತ್ತಿದ್ದನೋ ಎಂದು ಕೇಳಲಾಗಿ ಸಾಕ್ಷಿಯು ನಿಂತಿದ್ದನು ಎಂದು ನುಡಿದಿರುತ್ತಾರೆ. ಆರೋಪಿಯು ನಮ್ಮಿಂದ ಸುಮಾರು 10 ಮೀಟರ್ ಅಂತರದಲ್ಲಿ ನಿಂತಿದ್ದ. ಒಬ್ಬ ವ್ಯಕ್ತಿ ಸುಮಾರು 10 ಮೀಟರ್ ಅಂತರದಲ್ಲಿದ್ದರೆ ಪೊಲೀಸ್ ಆಗಿ ನೀವು ಆತನನ್ನು ಹಿಡಿಯಬಹುದಿತ್ತು ಎಂದರೆ ಸರಿ . ನಿಮ್ಮ ಪಿರ್ಯಾದಲ್ಲಿ ಒಂದು ಪ್ಲಾಸ್ಟಿಕ್ ಚೀಲ ಎಂದು ಹೇಳಿದ್ದು, ಬಿಳಿ ಪ್ಲಾಸ್ಟಿಕ್ ಚೀಲ ಎಂದು ಹೇಳಿಲ್ಲ ಎಂದರೆ ಸರಿ .

ಸಾಮಾನ್ಯವಾಗಿ ಮು.ಮ.1 ರಿಂದ 31 ರಂತಹ ಮಾಲುಗಳು ಠಾಣೆಯಲ್ಲಿ ವಿಲೇವಾರಿಯಾಗದೇ ಬಿದ್ದಿರುತ್ತವೆ ಎಂದರೆ ಸರಿ . ಓಡಿ ಹೋದ ಆರೋಪಿಯ ಹೆಸರು ಮತ್ತು ವಿಳಾಸವನ್ನು ಯಾರಿಂದ ತಿಳಿದುಕೊಂಡಿರುತ್ತೀರಾ ಎಂದು ಕೇಳಲಾಗಿ ಸಾಕ್ಷಿಯು ಅದೇ ಗ್ರಾಮದ ನಾಗರಾಜು ಎಂಬುವರಿಂದ ಕೇಳಿ ತಿಳಿದುಕೊಂಡಿರುತ್ತೇವೆ ಎಂದು ನುಡಿದಿರುತ್ತಾರೆ. ಸ್ಥಳ ಮಹಜರ್ ಕಾಲಕ್ಕೆ ಪಂಚರುದಾರರನ್ನಾಗಿ ಕೊತ್ತೇಗಾಲ

ಗ್ರಾಮದ ಮಹೇಶ ಮತ್ತು ಪುಟ್ಟೇಗೌಡ ಎಂಬುವವರು ಹಾಜರಿದ್ದು ಅವರ ಸಮಕ್ಷಮ ಸ್ಥಳ ಮಹಜರ್ ಮಾಡಿರುತ್ತೇವೆ.

ಕೃತ್ಯ ಸ್ಥಳದ ಚೆಕ್ಕುಬಂಧಿಯನ್ನು ಹೇಳುತ್ತೇನೆ. ಪಶ್ಚಿಮಕ್ಕೆ ದೊಡ್ಡಬರಗಿ ಗ್ರಾಮದ ಕಡೆಗೆ ಹೋಗುವ ರಸ್ತೆ ಇರುತ್ತದೆ. ಸ್ಥಳ ಮಹಜರನ್ನು ಠಾಣೆಯಲ್ಲಿ ಕುಳಿತು ತಯಾರು ಮಾಡಿದ್ದು , ನಮ್ಮ ಠಾಣಾಧಿಕಾರಿಗಳ ನಿರ್ದೇಶನ ಮೇರೆಗೆ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಪೊಲೀಸ್ ಠಾಣೆಯಲ್ಲಿ ಮಾಸಿಕ ಇಂತಿಷ್ಟು ಕೇಸು ದಾಖಲು ಮಾಡಬೇಕೆಂದಿದ್ದು ಅದರಂತೆ ನಾನು ಆರೋಪಿಯ ವಿರುದ್ಧ ಸುಳ್ಳು ಪಿರ್ಯಾದು ನೀಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮು.ಮ,1 ರಿಂದ 31 ಮತ್ತು ಆರೋಪಿತನಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

**(ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸಾ ಸ ಇ ಒ.,**

**ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ಹೆಗ್ಗಡದೇವನಕೋಟೆ.**